**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 567/2019**

**ಸಾಕ್ಷಿಗೆ ದಿನಾಂಕ 17.03.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸತೀಶ | ಪಿ.ಡಬ್ಲ್ಯೂ–16 |
| ತಂದೆಯ/ಗಂಡನ ಹೆಸರು | : | ರಾಮಶೆಟ್ಟಿ | ಸಿ.ಡಬ್ಲ್ಯೂ– 30 |
| ವಯಸ್ಸು | : | 55 | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಹಂಪಾಪುರ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುತ್ತದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿಯು ನಮ್ಮ ಗ್ರಾಮದವರಾಗಿದ್ದು ಇವರು ನಮ್ಮ ಮನೆಯ ಎದುರುಗಡೆ ಇದ್ದು ಒಂದು ಸಣ್ಣದಾಗಿ ಕ್ಲಿನೀಕ್ ಇಟ್ಟು ಕೊಂಡು ಮನೆಗೆ ಬರುವ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ ಆದರಂತೆ ದಿಃ 25.10.2017 ರಂದು ಕೋಹಾಳ ಗ್ರಾಮದ ನಿಂಗರಾಜು ಎಂಬುವವರ ಸುಮಾರು 18 ವರ್ಷದ ಮಗನಾದ ನಾಗರಾಜು ಎಂಬುವರಿಗೆ ಜ್ವರ ಬಂದಿದ್ದು

ಅವರು ನ್ಯಾಯಾಲಯದ ಮುಂದೆ ಇರುವ ಆರೋಪಿಯ ಕ್ಲಿನೀಕ್ ಗೆ ಚಿಕಿತ್ಸೆಗಾಗಿ ಬಂದಿದ್ದು ಆ ಸಮಯದಲ್ಲಿ ಆರೋಪಿಯು ಮೃತ ನಾಗರಾಜುವರನುನ ಪರೀಕ್ಷಿಸಿ ಎರಡು ಕುಂಡಿಗಳಿಗೆ ಇಂಜೆಕ್ಷನ್ ನೀಡಿ ಮಾತ್ರೆ ಕೊಟ್ಟು ಕುಳುಹಿಸಿದ್ದು ನಂತರದಲ್ಲಿ ಮೃತ ನಾಗರಾಜು ಇಂಜೆಕ್ಷನ್ ಮಾಡಿದ ಜಾಗದಲ್ಲಿ ಊತ ಕಂಡು ಬಂದು ಅದು ವಾಸಿಯಾಗದೇ ಹೆಚ್ಚಿನ ಚಿಕಿತ್ಸೆಗಾಗಿ ಕೆ ಆರ್ ಆಸ್ಪತ್ರೆ ಗೆ ಕರೆದು ಕೊಂಡು ಹೋಗಿದ್ದು ಅಲ್ಲಿ ಇಂಜೆಕ್ಷನ್ ಮಾಡಿದ ಜಾಗದಲ್ಲಿ ಕೀವು ತುಂಬಿಕೊಡಯಿ ಚಿಕಿತ್ಸೆ ಪಲಕಾರಿಯಾಗದೆ ಪುನ್ಹಃ ಹೆಚ್ಚಿನ ಚಿಕಿತ್ಸೆಗಾಗಿ ದಿಃ 27.10.2017 ರಂದು ಮಧ್ಯ ರಾತ್ರಿಯಲ್ಲಿ ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆ ಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಮೃತ ಪಟ್ಟಿರುತ್ತಾರೆ ಎಂಬ ವಿಚಾರವನ್ನು ಜೆ ಎಸ್ ಎಸ್ ಆಸ್ಪತ್ರೆಯ ವೈದ್ಯರು ದೃಡೀಕರಿಸಿದ್ದು, ಸದರಿ ಮೃತ ವ್ಯಕ್ತಿಯ ಸಾವಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಸ್ವತಃ ವೈದ್ಯನಲ್ಲದಿದ್ದರೂ ವೈದ್ಯನೆಂದು ನಂಬಿಸಿ ನಿರ್ಲಕ್ಷತೆಯಿಂದ ಸಾವನ್ನಪ್ಪಿರುತ್ತಾರೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ಮೃತ ವ್ಯಕ್ತಿಯ ತಂದೆಯ ಬಳಿ ಹೋಗಿ ಆರೋಪಿಯು ನಿಮಗೆ ರೂ.10 ಲಕ್ಷ ಗಳ ಹಣವನ್ನು ನೀಡುತ್ತೇನೆ ಈ ಸಮಯದಲ್ಲಿ ದೂರನ್ನು ನೀಡುವುದು ಬೇಡ ಎಂದು ಒಂದು ಕರಾರು ಪತ್ರವನ್ನು ಮಾಡಿಕೊಟ್ಟು ಘಟನೆ ನಡೆದ ದಿನ ದೂರನ್ನು ದಾಖಲು ಮಾಡಲು ಬಿಡದೆ ಸಾಕ್ಷಿ ನಾಶಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯು ನಮ್ಮ ಗ್ರಾಮದವರಾದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ ಮೇಲೆ ಓದಿ ಹೇಳಿದಂತೆ ದಿಃ 30.03.2018 ರಂದು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ 35 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹ ಆರೋಪಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ ಇಲ್ಲ.</u>**

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ